

# ಬೊಗಸೆಯಲಿ ಹೆಸರು

■ ರಜನಿ ಭಟ್, ಕಾವೂರು

ನಮ್ಮ ಹಿತ್ತಿಲಲ್ಲಿ ಒಂದಿಷ್ಟು ತರಕಾರಿಗಳನ್ನು ಬೆಳೆದಿದ್ದೇವೆ. ಬೆಳಗ್ಗೆ ಎದ್ದು ಮಕ್ಕಳು ಗಿಡಗಳ ದರುಶನ ಮಾಡುತ್ತಾ ಬ್ರಶ್ ಮಾಡೋದು ರೂಢಿ. ಅದು ನನ್ನವರಿಂದ ಮಕ್ಕಳಿಗೆ ಬಂದ ಅಭ್ಯಾಸ. ಅದರಲ್ಲಿ ಹೂ ಅರಳೋದು, ದುಂಬಿ ಬೆಳಗಿನ ಸಮಯದಲ್ಲಿ ಮಧು ಹೀರಲು ಬರೋದು ನೋಡಿ ಒಂದೆರಡು ಅವರ ಪಾಠಗಳಿಗೆ ಸಂಬಂಧಪಟ್ಟದ್ದು ಸಿಕ್ಕೇ ಸಿಗುತ್ತವೆ.

ಒಂದು ದಿನ ಹೆಸರು ಕಾಳನ್ನು ನೆನೆ ಹಾಕಲು ನೀರಿಗೆ ಹಾಕಲು ಹೊರಟಾಗ ನನ್ನ ಸಣ್ಣ ಮಗ ಅಮೋಘ ಬಂದ. 'ಎಂತಮ್ಮ ಇದು' ಅಂತ ಕೇಳಿದ.

'ಇದು ನಾಳೆಗೆ ನೋಡುವಾಗ ಮೊಳಕೆ ಬರುತ್ತದೆ ಅದನ್ನು ತಿಂದರೆ ನಿನಗೆ ಶಕ್ತಿ ಸಿಗುತ್ತದೆ. ಹಾಗೆಯೇ ಅದರಿಂದ ಗಿಡವೂ ಸಹ ಮಾಡಬಹುದು. ಅದು ದೊಡ್ಡದಾಗಿ ಹೂ ಆಗಿ ಅದರಲ್ಲಿ ಕೋಡುಗಳು ಬಂದು ಪುನಃ ನಮಗೆ ಹೆಸರು ಕಾಳುಗಳು ಸಿಗುತ್ತವೆ' ಅಂದೆ.

ಎಷ್ಟು ತಲೆಯೊಳಗೆ ಹೋಯ್ತೋ ಗೊತ್ತಿಲ್ಲ. ಆದರೆ ಮರುದಿನ ಮೊಳಕೆ ಬಂದಿದ್ದ ಹೆಸರನ್ನು ತಗೊಂಡು ಹೋಗಿ ನಾನು ನೆಟ್ಟಿದ್ದ ಗಿಡ ಒಂದು ಸತ್ತಿದ್ದ ಕವರ್‌ನಲ್ಲಿ ಹಾಕಿದ್ದ. ಅದರಲ್ಲಿ ಗೊಬ್ಬರ ತೆಂಗಿನ ನಾರಿನ ಮಿಕ್ಸ್ ಇದ್ದಿತ್ತು. ಅಲ್ಪ ಸ್ವಲ್ಪ ನೀರಿನ ಅಂಶವೂ ಇತ್ತು. ಮಾಡಿನ ಕೆಳಗೆ ಇರಿಸಿದ ಕಾರಣ ಅದಕ್ಕೆ ನೀರು ಹಾಕಬೇಕಿತ್ತು. ಅದರ ಬದಲಾಗಿ



## ಚಿನ್ನಮ್ಮನ ಸೈಕಲ್

ಮೂರು ಗಾಲಿಯ ಸೈಕಲ್
ತುಳಿಯುತ ಬಂದಳು ಚಿನ್ನಮ್ಮ
ಹಿಂದಕೆ ಮುಂದಕೆ ಚಲಿಸಿ
ನಲಿಯುತ ಇದ್ದಳು ಕಂದಮ್ಮ

ಟ್ರಿಣ್ ಟ್ರಿಣ್ ಬೆಲ್ಲು ಒತ್ತುತಾ
ಮನೆಯಲ್ಲೆಲ್ಲಾ ಸುತ್ತಿದಳು
ಸಂತಸದಿಂದ ನಕ್ಕು ನಲಿಯುತ
ನಗುವಿನ ವದನ ತೋರಿದಳು

ಜೋರಾಗಿ ತುಳಿಯುತ ಮಗುಚಿ
ಬಿದ್ದಿತು ಸೈಕಲ್ಲು
ಅಪ್ಪ ಎತ್ತಿದರು ನೋಡಿದರಾಗ
ಮುರಿದು ಬಿದ್ದಿತ್ತು ಒಂದಲ್ಲು

ಅಳುತಲಿ ಅಮ್ಮನ ಮಡಿಲು
ಸೇರಿದಳು ಚಿನ್ನಮ್ಮ
ಕೋಲನು ಎತ್ತುತಾ ಸೈಕಲ್ಗೆ
ಎರಡೇಟು ಕೊಟ್ಟರು ಅವರಮ್ಮ

ಅಪ್ಪ ಹೇಳಿದರು ಮತ್ತೆ ತುಳಿ
ಅದೇ ಸೈಕಲ್ಲು
ತಲೆಯಾಡಿಸುತಾ ಮಗಳು
ತೋರಿದಳು ಮುರಿದ ಹಲ್ಲು

■ ಸಿ.ಜಿ. ವೆಂಕಟೇಶ್ವರ